ನಡೆಸಲು ಜಾಗೃತ ಸಮಿತಿ ರಚಿಸಲು ಸರ್ಕಾರಿ ಆದೇಶ ಹೊರಡಿಸಲಾಗಿದೆ (ಸಂಖ್ಯೆ ಎಫ್‌ಟಿಡಿ 65 ಎಫ್‌ಸಿಎಸ್ 90 ದಿನಾಂಕ 27--7--90)

ANNEXURE

Statement showing the number of ration cards in the State at the end of October 1990.

Sl. No.	Districts	Ration Cards
1.	Bangalore (I.R.)	678976
2.	Bangalore (U)	169004
3.	Bangalore (R)	310751
4.	Belgaum	618599
5.	Bellary	283427
6.	Bidar	205249
7.	Bijapur	491605
8.	Chickamagalur	195515
9.	Chitradurga	397606
10.	Dakshina Kannada	464568
11.	Dharwar	550351
12.	Gulbarga	429773
13.	Hassan	280788
14.	Kodagu	102885
15.	Kolar	416956
16.	Mandya	301026
17.	Mysore	568393
18.	Raichur	390586
19.	Shimoga	316575
20.	Tumkur	413196
21.	Uttar Kannada	210582

ಗ್ರಾಮೀಣ ಪ್ರದೇಶಗಳಲ್ಲಿ ಸಂಚಾರಿ ಪಡಿತರ ಅಂಗಡಿಗಳನ್ನು ತೆರೆಯುವ ಬಗ್ಗೆ

542. ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಸಂಚಾರಿ ಪಡಿತರ ಅಂಗಡಿಗಳನ್ನು ಪ್ರಾರಂಭಿಸಲು ಸರ್ಕಾರ ಈ ಹಿಂದೆ ತೀರ್ಮಾನಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ ಸರ್ಕಾರದ ಈ ತೀರ್ಮಾನವನ್ನು ಕಾರ್ಯಗತಗೊಳಿಸಲಾಗಿದೆಯೇ?

ಇ) ಹಾಗಿದ್ದಲ್ಲಿ ಇದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ಈ) ರಾಜ್ಯದ ಎಲ್ಲಾ ಗ್ರಾಮೀಣ ಪ್ರದೇಶಗಳಲ್ಲಿಯೂ ಈ ಸೌಲಭ್ಯಗಳನ್ನು ಒದಗಿಸಲಾಗುವುದೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಇತ್ತೀಚಿನ ಇಂಧನ ಹಾಗೂ ಡೀಸೆಲ್ ಬೆಲೆಗಳ ಹೆಚ್ಚಳದಿಂದ ಈ ಸೌಲಭ್ಯಗಳನ್ನು ಒದಗಿಸಲಾಗುವುದಿಲ್ಲ.

ಶಿಗ್ಗಾಂವ ಪಿ.ಹೆಚ್.ಸಿ.ಯನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ

558. ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ಪಿ.ಹೆಚ್.ಸಿ.ಯನ್ನು ಅಪ್‌ಗ್ರೇಡ್ ಮಾಡಿ 6 ಹಾಸಿಗೆಗಳಿಂದ 30 ಹಾಸಿಗೆಗಳವರೆಗೆ ಹೆಚ್ಚಿಸಲು ಸರ್ಕಾರದವರ ಉದ್ದೇಶವೇನಾದರೂ ಇದೆಯೇ?

ಆ) ಹಾಗಿದ್ದಲ್ಲಿ ಇನ್ನೂ ಎಷ್ಟು ದಿವಸಗಳಲ್ಲಿ ಸದರಿಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು):–

ಅ) ಭಾರತ ಜನಸಂಖ್ಯಾ ಯೋಜನೆ–3 (ಕರ್ನಾಟಕ)ರ ಯೋಜನೆಯಲ್ಲಿ ಶಿಗ್ಗಾಂವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸಲಾಗಿದೆ.

ಆ) ಕಟ್ಟಡ ಪೂರ್ಣಗೊಂಡ ಕೂಡಲೆ.

ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಪೈಕಿ ನೇಸರ್ಗಿ ಗ್ರಾಮದಲ್ಲಿ ವೈದ್ಯಾಧಿಕಾರಿಗಳನ್ನು ನೇಮಿಸುವ ಬಗ್ಗೆ

544. ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ನೇಸರ್ಗಿ ಗ್ರಾಮದಲ್ಲಿ ಹಳೇ ಟಿ.ಡಿ.ಬಿ. ಹೆರಿಗೆ ಆಸ್ಪತ್ರೆ ಇದ್ದುದು ನಿಜವೇ?

ಆ) ಈ ಹೆರಿಗೆ ಆಸ್ಪತ್ರೆಗೆ ಒಬ್ಬ ವೈದ್ಯಾಧಿಕಾರಿಯನ್ನು (ಆನ್ ಡೆಪ್ಯುಟೇಷನ್) ಎರವಲು ಸೇವೆಯ ಮೇಲೆ ನೇಮಿಸಬೇಕೆಂದು ಸರ್ಕಾರದವರು ಆದೇಶ ನೀಡಿದ್ದು ನಿಜವೇ? ಮತ್ತು ಆದೇಶ ಹೊರಡಿಸಿದ ದಿನಾಂಕವಾವುದು?

ಇ) ಸರ್ಕಾರಿ ಆದೇಶದ ಪ್ರಕಾರ ಜೆ.ಡಿ. ಬೆಳಗಾಂ ಇವರು ಅಲ್ಲಿ ಒಬ್ಬ ಮೆಡಿಕಲ್ ಆಫೀಸರನ್ನು ಡೆಪ್ಯುಟೇಷನ್ ಮೇಲೆ ಪೋಸ್ಟಿಂಗ್ ಮಾಡಿದ ಸಂಗತಿ ನಿಜವೇ? ಅವರು ಎಷ್ಟು ದಿವಸ ಕಾರ್ಯ ನಿರ್ವಹಿಸಿದರು?

ಈ) ಈಗ ಆ ದವಾಖಾನೆಯಲ್ಲಿ ಯಾವುದೇ ವೈದ್ಯಾಧಿಕಾರಿಗಳು ಇಲ್ಲದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?